

ನಾಗೇಂದ್ರಪ್ಪನಿಗೆ ವಿಷಯ ತಿಳಿಸಿದರೆ, ಅವರು ಸಹಾಯ ಮಾಡ ಬಹುದು ಎಂದವನಿಗೆ ಯಾರೋ ಹೇಳಿದ್ದರಂತೆ.

ನಾಗೇಂದ್ರಪ್ಪನಿಗೆ ನೌಕರರ ಸಂಘದ ಪದಾಧಿಕಾರಿಯಾಗಿ, ಉದ್ಯೋಗಿಗಳ ಮೇಲೆ ಆಪಾದನೆಗಳು ಬಂದ ಸಂದರ್ಭದಲ್ಲಿ ಅವರನ್ನು ಪ್ರತಿನಿಧಿಸುವ ಹೊಣೆಯಿತ್ತು. ನೌಕರರ ಹಿತಕ್ಕಾಗಿ ಮ್ಯಾನೇಜ್‌ಮೆಂಟನ್ನು ಎದುರು ಹಾಕಿಕೊಳ್ಳಲೂ ಹಿಂದೇಟು ಹೊಡೆಯುವವರಲ್ಲ ಎಂದವರಿಗೆ ಹೆಸರಿತ್ತು.

ಚಾರ್ಜ್‌ಶೀಟನ್ನು ಓದಿ ನಾಗೇಂದ್ರಪ್ಪ ನಿಟ್ಟುಸಿರು ಬಿಟ್ಟರು. ಪ್ರಾದೇಶಿಕ ಕಚೇರಿಯವರು ತನಿಖೆ ನಡೆಸಿ, ಮಾದಗೋಪಾಲನ ಮೇಲೆ ಗುರುತರವಾದ ಆಪಾದನೆಗಳನ್ನು ಹೊರಿಸಿದ್ದರು.

ಸಾವಿತ್ರಮ್ಮ ಮಾದಗೋಪಾಲನ ಅಕ್ಕ ಎನ್ನುವುದನ್ನು ಪತ್ತೆ ಹಚ್ಚಿದ್ದರು. ಅಕ್ಕ–ತಮ್ಮ ಶಾಮೀಲಾಗಿ ಈ ಕೃತ್ಯ ಎಸಗಿದ್ದಾರೆ. ಕ್ಯಾಷಿನಲ್ಲಿ ಕೆಲಸ ಮಾಡುತ್ತಿರುವ ಅವಕಾಶವನ್ನು ಬಳಸಿ ಅಕ್ಕನ ಒಡವೆಯನ್ನು ಬಿಡಿಸಲು ಮಾದಗೋಪಾಲ ನೆರವು ನೀಡಿದ್ದಾನೆ. ಹಣ, ಸವಲತ್ತು ಮತ್ತು ಸ್ಥಾನವನ್ನು ದುರುಪಯೋಗಿಸಿ ವಂಚನೆ ಎಸಗಲಾಗಿದೆಯೆಂದು ಚಾರ್ಜ್‌ಶೀಟಲ್ಲಿ ಆರೋಪಿಸಲಾಗಿತ್ತು.

'ಗಂಟುಮೂಟೆ ಕಟ್ಟಿ ರೆಡಿಯಾಗು' – ನಾಗೇಂದ್ರಪ್ಪ ಸಿಟ್ಟಿನಿಂದ ಬೈದರು. ಕೆಲಸಕ್ಕೆ ಸೇರಿದ ವರ್ಷದಲ್ಲೇ ಗಂಭೀರವಾದ ಆಪಾದನೆಗೆ ಗುರಿಯಾದ ಮಾದಗೋಪಾಲನನ್ನು ಬಚಾವು ಮಾಡುವುದು ಅಶಕ್ಯವೇ ಆಗಿತ್ತು.

ನಾಗೇಂದ್ರಪ್ಪನ ಮಾತಿನಿಂದ ಮಾದಗೋಪಾಲ ಕಂಗೆಟ್ಟ. ನನ್ನ ಕುಟುಂಬದಲ್ಲಿ ಸರಕಾರಿ ಕೆಲಸಕ್ಕೆ ಸೇರಿದವನು ನಾನೊಬ್ಬನೇ, ಬ್ಯಾಂಕ್ ಕೆಲಸ ಬಿಟ್ಟರೆ ಗತಿಯೇ ಇಲ್ಲ, ಹೇಗಾದರೂ ಪಾರು ಮಾಡಿ ಎಂದು ಗೋಗರೆದ.

ಘಟನೆ ನಡೆದ ಹಿಂದಿನ ಭಾನುವಾರ ಅಕ್ಕನ ಮನೆ ಇಟಗಿಗೆ ಮಾದಗೋಪಾಲ ಹೋಗಿದ್ದ. ಸಾವಿತ್ರಮ್ಮ ಬ್ಯಾಂಕಿಂದ ಬಂದ ಹರಾಜು ನೋಟೀಸು ತೋರಿಸಿ, 'ಮದುವೆಯಲ್ಲಿ ಹಾಕಿದ ಸರ, ಮಗು ಆಸ್ಪತ್ರೆಗೆ ಸೇರ್‍ಸಿದಾಗ ಅಡವಿಟ್ಟಿದ್ದು, ಬಿಡಿಸಿಕೊಡು' ಎಂದಿದ್ದಳು. ಕೆಲಸಕ್ಕೆ ಸೇರಿ ವರ್ಷ ಕಳೆದುದರಿಂದ ತಮ್ಮನ ಹತ್ತಿರ ದುಡ್ಡಿದೆಯೆಂದು ಸಾವಿತ್ರಮ್ಮ ಭಾವಿಸಿದ್ದಳು.

ಮಾದಗೋಪಾಲ ಕಾಲೇಜಲ್ಲಿ ಓದುತ್ತಿದ್ದಾಗ ಅಕ್ಕನ ಮದುವೆಯಾಗಿತ್ತು. ಹರಿಹರದಲ್ಲಿ ಕೆಲಸಕ್ಕಿದ್ದ ಭಾವ, ಕಿರ್ಲೋಸ್ಕರ್ ಕಂಪನಿ ಮುಚ್ಚಿದ ನಂತರ ಇಟಗಿಗೆ ಬಂದಿದ್ದರು. ಅವರಿಗೆ ಕೆಲಸವಿಲ್ಲ. ಒಡವೆ ಬಿಡಿಸಿಕೊಡು ಎಂದು ಅಕ್ಕ ಅಂಗಲಾಚಿದಾಗ ಮಾದಗೋಪಾಲ ನೊಂದಿದ್ದ.

ಮಾದಗೋಪಾಲನಿಗೆ ಬ್ಯಾಂಕಲ್ಲಿ ಕೆಲಸ ಸಿಕ್ಕಿದ ಬಳಿಕ ವಯಸ್ಸಾದ ತಂದೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮಾದಗೋಪಾಲನೇ ನಿಲ್ಲಿಸಿದ್ದ. ಸಂಬಳದಲ್ಲಿ ಏನೂ ಉಳಿಯುತ್ತಿರಲಿಲ್ಲ. ಅದನ್ನು ಅಕ್ಕನಿಗೆ ಹೇಳುವಂತಿಲ್ಲ. ಮಗು ಅನಾರೋಗ್ಯದಿಂದ ಬಾಧೆ ಪಡುವುದನ್ನು ಕಣ್ಣಾರೆ ಕಂಡಿದ್ದ.

ಅಕ್ಕನ ಮನೆಯಿಂದ ಹೊರಟಾಗ ಧೈರ್ಯ ಮಾಡಿ 'ಒಡವೆ ಬಿಡಿಸು, ಹಣ ಹಾಕಿರುತ್ತೇನೆ' ಎಂದು ಹೇಳಿದಂತೆ ಇಟಗಿ ಬ್ರಾಂಚಿಗೆ ಟ್ರಾನ್ಸ್‌ಫರ್ ಮಾಡಿದ್ದ. ಗೆಳೆಯರಿಗೆ ಫೋನ್ ಮಾಡಿ ಹಣ ಹೊಂದಿಸಲು ಪ್ರಯತ್ನಿಸಿದ. ಎಲ್ಲಿಯೂ ಸಿಗಲಿಲ್ಲ. ಆ ಹೊತ್ತಿಗೆ ಸಾವಿತ್ರಮ್ಮ ಇಟಗಿ ಬ್ರಾಂಚಿಗೆ ಬಂದು, ಜಮಾ ಆದ ಮೊತ್ತವನ್ನು ಸಾಲಕ್ಕೆ ತುಂಬಿಸಿ ಒಡವೆಯನ್ನು ಪಡೆದಿದ್ದಳು.

ಕಂದು ಬಣ್ಣದ, ಕೃಶಕಾಯದ ಮಾದಗೋಪಾಲನ ಕೆನ್ನೆಯ ಮೂಳೆಗಳು ಎದ್ದು ಕಾಣುತ್ತಿದ್ದು, ಕಡು ಕಪ್ಪು ಮೀಸೆ ಮಾತ್ರ ಅವನಿಗೆ ಇಪ್ಪತ್ತೈದು ಆಗಿದೆಯೆಂದು ತೋರಿಸುತ್ತಿತ್ತು. ಆತನನ್ನು ನೋಡಿ ನಾಗೇಂದ್ರಪ್ಪನಲ್ಲಿ ಕನಿಕರ ಮೂಡಿತು. ಗೆಲ್ಲುವುದು ಕಷ್ಟವೆಂದು ಗೊತ್ತಿದ್ದರೂ ನಿರಾಶೆ ಮೂಡಿಸದೆ, 'ವಿಚಾರಣೆ ನಡೆಯಲಿ, ನೋಡೋಣ' ಎಂದು ಮಾದಗೋಪಾಲನಿಗೆ ಭರವಸೆ ನೀಡಿ ಕಳಿಸಿದರು.

ಸಿಬ್ಬಂದಿಯ ವಿರುದ್ಧ ಆರೋಪಗಳು ಬಂದಾಗ ಆಂತರಿಕ ವಿಚಾರಣೆ ನಡೆಸಲಾಗುತ್ತದೆ. ಬ್ಯಾಂಕಿಂದ ನೇಮಿಸಲ್ಪಟ್ಟ ವಿಚಾರಣಾಧಿಕಾರಿ ನೇತೃತ್ವ ವಹಿಸುತ್ತಾರೆ. ವಿಚಾರಣೆಯ ಸಂದರ್ಭದಲ್ಲಿ ಬ್ಯಾಂಕ್ ಮ್ಯಾನೇಜ್‌ಮೆಂಟಿನ ಪ್ರತಿನಿಧಿಯೊಬ್ಬರು ಆರೋಪ ಕುರಿತ ಮಾಹಿತಿಗಳನ್ನು ಮಂಡಿಸುತ್ತಾರೆ. ಆರೋಪಿಯ ಪರವಾಗಿ ಆತನ ಸಂಘಟನೆಯ ಪದಾಧಿಕಾರಿ, ನಿರಪರಾಧಿತ್ವವನ್ನು ಸಾಬೀತು ಪಡಿಸುವ ದಾಖಲೆಗಳಿದ್ದರೆ ಸಲ್ಲಿಸಿ, ವಾದಿಸಬೇಕು.

ವಿಚಾರಣಾಧಿಕಾರಿಯ ತೀರ್ಮಾನವೇ ಹೆಚ್ಚಿನ ಸಂದರ್ಭಗಳಲ್ಲಿ ಅಂತಿಮ. ಮೇಲ್ಮನವಿ ಸಲ್ಲಿಸುವ ಅವಕಾಶವಿದ್ದರೂ ಉಪಯೋಗವಾಗುವುದು ಕಡಿಮೆ. ಬ್ಯಾಂಕ್ ಆಡಳಿತ ಸಿಬ್ಬಂದಿಯ ವಂಚನೆ ಪ್ರಕರಣಗಳಲ್ಲಿ ನಿಷ್ಠುರವಾಗಿರುವುದರಿಂದ ಪಾರುಮಾಡುವುದು ಕಠಿಣವಾದ ಕೆಲಸ.

ದಾವಣಗೆರೆಯಲ್ಲಿ ವಿಚಾರಣೆಯ ದಿನಾಂಕ ನಿಗದಿಯಾಗಿ, ಉನ್ನತ ಮಟ್ಟದ ಅಧಿಕಾರಿ, ಕಾರ್ಮಿಕ ಕಾಯಿದೆಯಲ್ಲಿ ಪರಿಣತರಾದ ವಾಮನ ನೀಲೇಶ್ವರ ವಿಚಾರಣಾಧಿಕಾರಿಯಾಗಿ ನಿಯುಕ್ತಿಗೊಂಡಾಗ ನಾಗೇಂದ್ರಪ್ಪ ಆತಂಕಕ್ಕೊಳಗಾಗಿದ್ದು ಸುಳ್ಳಲ್ಲ. ನೀಲೇಶ್ವರ ಮೋಸ–ವಂಚನೆಯನ್ನು ಸಹಿಸುವವರಲ್ಲ; ಸಣ್ಣ ಪುಟ್ಟ ಅಪರಾಧಗಳಿಗೂ ಕಠಿಣ ಶಿಕ್ಷೆಗೆ ಶಿಫಾರಸು ನೀಡುವವರೆಂಬ ಅಪಖ್ಯಾತಿ ಅವರಿಗಿತ್ತು. ಇವತ್ತು ಅಡಿಕೆ ಕದ್ದವ ನಾಳೆ ಆನೆ ಕದಿಯುತ್ತಾನೆ ಎನ್ನುವುದು ಅವರ ಧ್ಯೇಯವಾಕ್ಯ.

ವಿಚಾರಣಾಧಿಕಾರಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ ಆರೋಪಗಳನ್ನು ಉಲ್ಲೇಖಿಸಿ, 'ನೀವಿದನ್ನು ಒಪ್ಪುತ್ತೀರಾ?' ಎನ್ನುವ ಸಾಂಪ್ರದಾಯಿಕ ಪ್ರಶ್ನೆಯನ್ನು ಕೇಳಿದರು. ಮಾದಗೋಪಾಲ 'ಒಪ್ಪುವುದಿಲ್ಲ' ಎಂದುತ್ತರಿಸಿದ ನಂತರ ಮ್ಯಾನೇಜ್‌ಮೆಂಟ್ ಪ್ರತಿನಿಧಿಗೆ ದಾಖಲೆ ಸಮೇತ ಅಹವಾಲನ್ನು ಮಂಡಿಸುವ ಅವಕಾಶ ನೀಡಲಾಯಿತು.